ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು – 570017
ದೂರವಾಣಿ ಸಂಖ್ಯೆ: 0821– 2343384

CHAMUNDESHWARI ELECTRICITY
SUPPLY CORPORATION LIMITED
(Government of Karnataka undertaking)
Corporate Office,
CESC, Mysuru-570017
Website: www.cescmysore.org
E-mail ID: agmtax@cescmysore.org

Company Identity Number[CIN]:- U40109KA2004SGCO35177

ಕ್ರಮಾಂಕ: ಸೆಸ್ಕ್/ತೆರಿಗೆ/02/09/2021-22/ Cys-651 ದಿನಾಂಕ: 09 AUG 2021

## ಸುತ್ತೋಲೆ

**ವಿಷಯ:**-ಆರ್ಥಿಕ ವರ್ಷ 2021-22ನೇ ಸಾಲಿನ ಶಾಸನಬದ್ಧ ತೆರಿಗೆ ಪಾವತಿ ಹಾಗೂ TDS Defaults ಸಂಬಂಧ ವಹಿಸಬೇಕಾದ ಕ್ರಮಗಳ ಬಗ್ಗೆ.

**ಉಲ್ಲೇಖ:** 1) ಸುತ್ತೋಲೆ ಸಂಖ್ಯೆ: CESC/Tax/01/09/2021-22/Cys-450 Dated.28.06.2021
2) ನಿಗಮದ ಪತ್ರ ಸಂಖ್ಯೆ: ಸೆಸ್ಕ್/ತೆರಿಗೆ/01/08/2021-22/ಸಿವೈಎಸ್-426, ದಿನಾಂಕ: 14.6.2021.

********

ಆರ್ಥಿಕ ವರ್ಷ 2020-21ನೇ ಸಾಲಿನ ತೆರಿಗೆ ಶಾಖೆಯ ಮಾರ್ಚ್ ಅಂತಿಮ ಲೆಕ್ಕಪತ್ರದ ಅನುಬಂಧಗಳನ್ನು ಲೆಕ್ಕಘಟಕಗಳಿಂದ ಸಲ್ಲಿಸಲಾಗಿ, ಸದರಿ ಅನುಬಂಧಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು ಅನುಸರಿಸಬೇಕಾದ ಕ್ರಮಗಳು:

1. ಆರ್ಥಿಕ ವರ್ಷ 2020-21ನೇ ಸಾಲಿನ ಮಾರ್ಚ್ ಅಂತಿಮ ಲೆಕ್ಕಪತ್ರದ ತೆರಿಗೆ ಸಂಬಂಧಿತ ಅನುಬಂಧಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಕೆಲವು ಲೆಕ್ಕ ಘಟಕಗಳು ಶಾಸನಬದ್ಧ ತೆರಿಗೆ ಪಾವತಿ (Statutory Payment) ಗಳನ್ನು ನಿಗದಿತ ಸಮಯದಲ್ಲಿ ಪಾವತಿಸದಿರುವುದು ಕಂಡುಬಂದಿರುತ್ತದೆ. ಕ್ಯಾಲೆಂಡರ್ ಮಾಹೆಯಲ್ಲಿ ಬಿಲ್ ರಿಜಿಸ್ಟರ್ ಸಂಖ್ಯೆ ಪಡೆದ ಎಲ್ಲಾ ಬಿಲ್ಲಗಳ ಮೇಲಿನ ಟಿಡಿಎಸ್/ಟಿಸಿಎಸ್ ಹೊಣೆಗಾರಿಕೆಯು, ಮುಂದಿನ ಮಾಹೆಯ 7ನೇ/10ನೇ ದಿನಾಂಕದೊಳಗೆ ಪಾವತಿಸಬೇಕಾಗಿರುತ್ತದೆ. ತಪ್ಪಿದ್ದಲ್ಲಿ, ಕಡಿಮೆ ಪಾವತಿ ಸಂಬಂಧ ಬಡ್ಡಿ ಮತ್ತು ದಂಡವನ್ನು ಸದರಿ ಇಲಾಖೆಯವರು ವಿಧಿಸುತ್ತಾರೆ. ಆದ್ದರಿಂದ, ಪ್ರತಿ ತಿಂಗಳಿನ ಅಂತ್ಯದವರೆಗಿನ ಎಲ್ಲಾ ಬಿಲ್ಲುಗಳ ನಿಧಿ ಕೋರಿಕೆಯನ್ನು ತಿಂಗಳಾಂತ್ಯದಲ್ಲಿ ಸಲ್ಲಿಸಿದಲ್ಲಿ, ಹಣಕಾಸು ಶಾಖೆಯಿಂದ ಶಾಸನಬದ್ಧ ತೆರಿಗೆ ಮೊತ್ತಗಳ ನಿಧಿಯನ್ನು ನಿಗಧಿತ ದಿನಾಂಕದೊಳಗೆ ಸಂಬಂಧಪಟ್ಟ ಇಲಾಖೆಗೆ ಪಾವತಿಸಲು ನೀಡಲಾಗುತ್ತದೆ.

   TDS Defaults Report ನಲ್ಲಿ ಯಾವುದೇ ಲೆಕ್ಕಘಟಕವು short payment ಅಡಿಯಲ್ಲಿನ ಮೊತ್ತಕ್ಕೆ ನಿಧಿ ಕೊರತೆಯ ಕಾರಣವನ್ನು ನಿಗಮ ಕಛೇರಿಗೆ ತಿಳಿಸುವುದು ಸಕಾರಣವಲ್ಲ. ಹಾಗೂ ಎಲ್ಲಾ ಲೆಕ್ಕ ಘಟಕಗಳು ಶಾಸನಬದ್ಧ ತೆರಿಗೆ ಪಾವತಿ (Statutory Payment) ಗಳನ್ನು ನಿಗದಿತ ಸಮಯದಲ್ಲಿ ಪಾವತಿಸದಿರುವ್ಯದರಿಂದ ನಿಗಮಕ್ಕೆ ಹೆಚ್ಚುವರಿಯಾಗಿ ನಷ್ಟ ಉಂಟಾದಲ್ಲಿ, ಸಂಬಂಧ ಪಟ್ಟ ಅಧಿಕಾರಿ/ನೌಕರರೇ ಜವಾಬ್ದಾರರಾಗಿರುತ್ತಾರೆ.

2. ಆದಾಯ ತೆರಿಗೆ ಕಾಯ್ದೆಯ ಹೊಸ ಸೆಕ್ಷನ್ 206AB ಹಾಗೂ 206CCA ಗೆ ಸಂಬಂಧಿಸಿದಂತೆ ಈಗಾಗಲೇ ನಿಗಮದ ವತಿಯಿಂದ ಮೇಲ್ಕಂಡ ಉಲ್ಲೇಖ (1)ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಎಲ್ಲಾ ಲೆಕ್ಕ ಘಟಕಗಳಿಂದ ಸರಕು/ಸೇವೆ ಸರಬರಾಜುದಾರರ PAN ಮಾಹಿತಿಯನ್ನು ಪಡೆದು Income Tax portalನ Compliance Check ಅಡಿಯಲ್ಲಿ ಪರಿಶೀಲಿಸಿ ನಿಗಮ ಕಛೇರಿಯು ಹೆಚ್ಚುವರಿ ಟಿಡಿಎಸ್/ಟಿಸಿಎಸ್ ದರ ಅನ್ವಯದ ಬಗ್ಗೆ ತಿಳಿಸಲಾಗಿದೆ. ಆರ್ಥಿಕ ವರ್ಷ 2021-22ರ ಟಿಡಿಎಸ್/ಟಿಸಿಎಸ್ ದರ ಚಾರ್ಟನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. ಯಾವುದೇ ಹೊಸ ಸರಕು/ಸೇವೆ ಸರಬರಾಜುದಾರರು ಸೇರ್ಪಡೆಯಾದಲ್ಲಿ, ಸೆಕ್ಷನ್ 206AB/206CCAರ ಅನ್ವಯದ ಬಗ್ಗೆ ತೆರಿಗೆ ಶಾಖೆಯಿಂದ ಮಾಹಿತಿ ಪಡೆಯುವುದು. ತತ್ಸಂಬಂಧದ TDS Defaults ನಿಂದ ನಿಗಮಕ್ಕೆ ಆರ್ಥಿಕ ನಷ್ಟ ಉಂಟಾಗದಂತೆ ಸೂಕ್ತ ಕ್ರಮಕೈಗೊಳ್ಳುವುದು.

3) ಉಲ್ಲೇಖ (2) & (3) ರಲ್ಲಿ ಈಗಾಗಲೇ ತಿಳಿಸಿದಂತೆ ಆದಾಯ ತೆರಿಗೆ ಇಲಾಖೆಯ Traces ತಂತ್ರಾಂಶದಲ್ಲಿ ಲೆಕ್ಕಘಟಕಗಳ Defaults Summary Report ನ್ನು ಪರಿಶೀಲಿಸಿದಾಗ, ಕೆಲವು ಲೆಕ್ಕಘಟಕಗಳ TDS

Defaults ಮೊತ್ತಗಳು ನಿಗಧಿತ ಸಮಯದಲ್ಲಿ ಪಾವತಿಸದಿರುವುದು, ಕಡಿಮೆ ಕಡಿತಗೊಳಿಸಿರುವುದು ಮತ್ತು ಕಡಿಮೆ ಪಾವತಿಸಿರುವುದು ಕಂಡುಬಂದಿರುತ್ತದೆ. ಸದರಿ Defaults ಮೊತ್ತಗಳ ಮೇಲೆ ಬಡ್ಡಿ ಹಾಗೂ ದಂಡದ ಮೊತ್ತವು ಹೆಚ್ಚುವರಿಯಾಗುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಸದರಿ Defaults ಮೊತ್ತಗಳನ್ನು ಕೂಡಲೇ ಶೂನ್ಯವಾಗಿಸಲು ಸೂಚಿಸಿದೆ. ಆರ್ಥಿಕ ವರ್ಷ 2021-22ರಲ್ಲಿ ಯಾವುದೇ TDS Defaults ಸಂಗ್ರಹವಾಗದಂತೆ ಲೆಕ್ಕ ಘಟಕಗಳು ಕ್ರಮ ವಹಿಸುವುದು. ಟಿಡಿಎಸ್ ಕಡಿಮೆ ಕಡಿತ & ಕಡಿಮೆ ಪಾವತಿ Defaults ನಮೂದಾಗುವ ಕಾರಣಗಳನ್ನು **ಅನುಬಂಧ -2** ರಲ್ಲಿ ವಿವರಿಸಲಾಗಿದೆ. ಮುಂದೆ, ಸದರಿ ಕಾರಣಗಳಿಂದ Defaults ಸಂಗ್ರಹವಾಗದಂತೆ ಎಚ್ಚರವಹಿಸುವುದು.

ಆಂತರಿಕ ಪರಿಶೋಧನೆ ವಿಭಾಗದವರು ಪ್ರತಿ ಬಿಲ್ಲಿನ ಪರಿಶೋಧನೆ ಸಮಯದಲ್ಲಿ ಸರಿಯಾದ ಟಿಡಿಎಸ್/ಟಿಸಿಎಸ್ ದರ ಅನ್ವಯವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು. ಇಲ್ಲವಾದಲ್ಲಿ Defaults Report ನಲ್ಲಿ ಕಡಿಮೆ ಕಡಿತ, ಕಡಿಮೆ ಪಾವತಿ ಮತ್ತು ತತ್ಸಂಬಂಧದ ಮೇಲಿನ ಬಡ್ಡಿ , ದಂಡ , ವಿಳಂಬ ಫೈಲಿಂಗ್‌ಗಾಗಿ ದಂಡ & ಬಡ್ಡಿ ಸಂಗ್ರಹವಾಗುವುದು. ಯಾವುದೇ ಲೆಕ್ಕ ಘಟಕದಲ್ಲಿ ಪ್ರಸ್ತುತ ವರ್ಷದಿಂದ TDS Defaults ವರದಿಯಾಗದಂತೆ ಹಾಗೂ ಟಿಡಿಎಸ್ ಮತ್ತು ಟಿಸಿಎಸ್ ರಿಟರ್ನ್ಸ್‌ನ್ನು ನಿಗಧಿತ ಸಮಯದೊಳಗೆ ಫೈಲಿಂಗ್ ಮಾಡಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

ಈ ಸಂಬಂಧ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ರವರು ಮುರುಗಡೆ ಮಾಡಿದ ಟಿ.ಡಿ.ಎಸ್ ಪಾವತಿ ಹಾಗೂ ನಮೂನೆಗಳನ್ನು ಸಲ್ಲಿಸುವ ಬಗ್ಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ನಿರ್ದೇಶಿಸಿರುತ್ತಾರೆ.

4) TDS Defaults Report ನಲ್ಲಿನ ಇಲ್ಲಿಯವರೆಗಿನ ಅಂಕಿಅಂಶಗಳ ಪ್ರಕಾರ ತೆರಿಗೆ ಪ್ರಾಧಿಕಾರವು ವಿಧಿಸಿರುವ ಬಡ್ಡಿ ಮತ್ತು ದಂಡದ ಮೊತ್ತವು Defaults ಮೊತ್ತದ 35% ನಷ್ಟಿರುತ್ತದೆ. ಅದರಿಂದ ನಿಗಮಕ್ಕೆ ಉಂಟಾಗುವ ಆರ್ಥಿಕ ನಷ್ಟದ ಮೊತ್ತಕ್ಕೆ ನೇರವಾಗಿ ಸಂಬಂಧಪಟ್ಟ ಅಧಿಕಾರಿಗಳೇ ನೇರ ಹೊಣೆಗಾರರಾಗುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿ,

**ಪ್ರತಿಗಳು:-**

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ, ನಿಗಮ ಕಛೇರಿ, ಮೈಸೂರು, ರವರ ಮಾಹಿತಿಗಾಗಿ.
- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಕಾ ಮತ್ತು ಪಾ ವಲಯ ಕಛೇರಿ, ಮೈಸೂರು/ಹಾಸನ ರವರ ಮಾಹಿತಿಗಾಗಿ.
- ನಿಯಂತ್ರಣಾಧಿಕಾರಿಗಳು ವಲಯ ಕಛೇರಿ, ಮೈಸೂರು/ಹಾಸನ, **ತಮ್ಮ ವ್ಯಾಪ್ತಿಯ ಲೆಕ್ಕಘಟಕಗಳ TDS Defaults clearance ಬಗ್ಗೆ ಸಮರೋಪಾದಿಯಲ್ಲಿ ಮೇಲ್ವಿಚಾರಣೆ ನಡೆಸಿ ಪ್ರತಿ ಮಾಹೆ ನಿಗಮ ಕಛೇರಿಗೆ ವರದಿ ಸಲ್ಲಿಸುವುದು.**
- ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ ಕಛೇರಿ, ಮೈಸೂರು/ಮಂಡ್ಯ/ಚಾಮರಾಜನಗರ-ಕೊಡಗು/ ಹಾಸನ, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು(ಲೆಕ್ಕ ಮತ್ತು ಕಂ), ಚಾವಿಸನಿನಿ, ನಿಗಮ ಕಛೇರಿ, ಮೈಸೂರು.
- ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು ಕಾ ಮತ್ತು ಪಾ ವೃತ್ತ ಕಛೇರಿಗಳು, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು (ಎಮ್.ಐ.ಎಸ್) ನಿಗಮದ ಅಧಿಕೃತ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.
- ಆಪ್ತ ಕಾರ್ಯದರ್ಶಿ, ವ್ಯನಿ/ನಿ(ತಾಂ)/ಮುಆಅ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾವಿಸನಿನಿ. ತಮ್ಮ ಅಧೀನ ಕಛೇರಿಗಳಿಗೆ ಸದರಿ ಸುತ್ತೋಲೆಯನ್ನು ರವಾನಿಸತಕ್ಕದ್ದು..
- ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನೆ, ವಿಭಾಗಗಳು, ಚಾವಿಸನಿನಿ.
- ಎಲ್ಲಾ ಲೆಕ್ಕಾಧಿಕಾರಿಗಳು (ಆಂ ಪ) ಕಾ ಮತ್ತು ಪಾ, ವಿಭಾಗಗಳು/ವೃತ್ತಗಳು, ಚಾವಿಸನಿನಿ.
- ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಂ ನಿ) ನಿಗಮ ಕಛೇರಿ, ಚಾವಿಸನಿನಿ. ಮೈಸೂರು.
- ಮು.ಕ.